# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.559-2017** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಹನುಮಂತಶೆಟ್ಟಿ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 29-09-2022. |

**<u>ಪಾಟೀ ಸವಾಲುಃ ಶ್ರೀ ಬಿ.ವೈ ವಕೀಲರಿಂದಃ</u>**

ನನ್ನ ತಂದೆ ಹೆಸರು ರಾಮಶೆಟ್ಟಿ, ನನ್ನ ತಂದೆ ಹೆಸರಿನಲ್ಲಿ ಜಮೀನು ಇತ್ತು. ಅದರ ಸರ್ವೇ ನಂಬರ್ ಹೇಳಲು ಆಗುವುದಿಲ್ಲ. ಅದರ ವಿಸ್ತೀರ್ಣ 3 ಎಕರೆ 20 ಗುಂಟೆ ಇತ್ತು. ನಾನು ಸದರಿ ಜಮೀನಿಗೆ ಸಂಬಂಧಿಸಿದಂತೆ ಈ ದಾವೆಯನ್ನು ಸಲ್ಲಿಸಿರುತ್ತೇನೆ. ದಾವಾ ಷೆಡ್ಯೂಲ್ ಸ್ವತ್ತು ನನ್ನ ತಂದೆ ಹೆಸರಿನಲ್ಲಿ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನನ್ನ ತಾತ ಹೆಸರು ನನ್ನ ಗೊತ್ತಿಲ್ಲ. ನನ್ನ ತಾತನವರ ಹೆಸರಿನಲ್ಲಿ ಯಾವುದೇ ಜಮೀನು ಇರಲಿಲ್ಲ. ನನ್ನ ತಂದೆ ಮೂಲತಃ ನಂಜನಗೂಡಿನ ಹಳೇಪುರ ಗ್ರಾಮದವರು ಎಂದರೆ ಸರಿ. ನನ್ನ ತಾಯಿ ಕಾರೆಮೊಳೆ ಗ್ರಾಮಕ್ಕೆ ವಿವಾಹವಾಗಿ ಬಂದಿದ್ದರು, ಅವರು ಮೂಲತಃ ಕುಂತೂರಿನವರು. ನನ್ನ ತಾಯಿಯವರ ತಾಯಿ ಬಸಮ್ಮ ಕುಂತೂರಿನವರು. ನನ್ನ ತಂದೆ-ತಾಯಿ ವಿವಾಹವಾದ ನಂತರ ಕಾರೆಮೊಳೆಯಲ್ಲಿ ನೆಲೆಸಿದ್ದರು ಎಂದರೆ ಸರಿ. ನನ್ನ ತಂದೆ-ತಾಯಿ ವಿವಾಹವಾದ ನಂತರ ಹಳೇಪುರದಲ್ಲಿ ವಾಸವಿರಲಿಲ್ಲ. ಅವರು ಅವರ ಹೆಂಡತಿಯ ಮನೆಯಾದ ಕಾರೆಮೊಳೆಯಲ್ಲಿ ವಾಸವಿದ್ದರು. ನನ್ನ ತಂದೆಯವರು ಜೀವನಕ್ಕಾಗಿ ಕೂಲಿ ಮಾಡುತ್ತಿದ್ದರು ಎಂದರೆ ಸರಿ.

2. ನನ್ನ ತಂದೆ-ತಾಯಿವರು ಬಡಕುಟುಂಬದವರಾಗಿದ್ದು ಕೂಲಿಯೇ ಅವರ ಜೀವನಕ್ಕೆ ಆಧಾರವಾಗಿತ್ತು ಎಂದರೆ ಸರಿ. ನನ್ನ ತಂದೆ-ತಾಯಿಯದ್ದು ದೊಡ್ಡಕುಟುಂಬವಾಗಿದ್ದು ಅವರಿಗೆ ಒಟ್ಟು 5 ಜನ ಗಂಡು ಮಕ್ಕಳು ಇದ್ದು, ಅವರಗಳೇ ಈ ದಾವೆಯ ವಾದಿಗಳು ಮತ್ತು 1 ನೇ ಪ್ರತಿವಾದಿ ಆಗಿರುತ್ತೇವೆ ಎಂದರೆ ಸರಿ. ವಿವಾಹದ ಪೂರ್ವದಲ್ಲಿ ಕುಟುಂಬವು ದೊಡ್ಡದಾದ ಕಾರಣ

ನಾವುಗಳು ಸಹೋದರರು ಗ್ರಾಮವನ್ನು ತೊರೆದು ಕೆಲಸಕ್ಕೆಂದು ಬೇರೆ ಬೇರೆ ಊರುಗಳಿಗೆ ಹೋದೆವು ಎಂದರೆ ಸರಿಯಲ್ಲ. ನನ್ನ ಅಣ್ಣ 1 ನೇ ಪ್ರತಿವಾದಿ ರಂಗಶೆಟ್ಟಿ ರವರು ಮಂಡ್ಯ ಜಿಲ್ಲೆಯ ಕಿರಿಗಂದೂರಿನ ಸಿದ್ದೇಗೌಡರ ಮನೆಯಲ್ಲಿ ಜೀತಕ್ಕೆ ಇದ್ದರು ಮತ್ತು ಅಲ್ಲಿ ಸುಮಾರು 30 ವರ್ಷಗಳ ಕಾಲ ಕೆಲಸ ಮಾಡಿದರು ಎಂದರೆ ಸರಿಯಲ್ಲ. ನನ್ನ ಅಣ್ಣ 1 ನೇ ಪ್ರತಿವಾದಿಯ ವಿವಾಹವನ್ನು ಸಿದ್ದೇಗೌಡರೇ ನಿಂತು ಮಾಡಿರುತ್ತಾರೆ ಎಂದರೆ ಸರಿಯಲ್ಲ.

3. ನಾನು ಮಂಡ್ಯ ತಾಲ್ಲೂಕಿನ ಪಿಹಳ್ಳಿಯ ಹನುಮಂತೇಗೌಡರ ಮನೆಯಲ್ಲಿ ಸುಮಾರು 15 ವರ್ಷಗಳ ಕಾಲ ಜೀತಕ್ಕೆ ಇದ್ದೆನು ಎಂದರೆ ಸರಿ. ಈ ದಾವಾ ಸಲ್ಲಿಸುವ ಪೂರ್ವದ 2 ವರ್ಷದ ಮೊದಲು ನಾನು ಕಾರೆಮೊಳೆ ಗ್ರಾಮಕ್ಕೆ ವಾಪಸ್ಸು ಬಂದಿರುತ್ತೇನೆ ಎಂದರೆ ಸರಿ. ಅಲ್ಲಿ ನನ್ನ ಹೆಂಡತಿ ಮಕ್ಕಳ ಜೂತೆ ಪ್ರತ್ಯೇಕವಾಗಿ ಮನೆಕಟ್ಟಿಕೊಂಡು ವಾಸವಿದ್ದೇನೆ ಎಂದರೆ ಸರಿ.

4. ನನ್ನ ಸಹೋದರ 2 ನೇ ವಾದಿ ಮಂಡ್ಯ ತಾಲ್ಲೂಕಿನ ಕೊತ್ತತ್ತಿಯಲ್ಲಿ ಕೆಲಸಕ್ಕೆ ಇದ್ದರು ಎಂದರೆ ಸರಿ. ಅವರು ಕೆಲಸ ಮಾಡುತ್ತಿದ್ದ ಜಮೀನ್ದಾರರ ಹೆಸರು ನನಗೆ ಗೊತ್ತಿಲ್ಲ. ಈಗಲೂ ಕೂಡ 2 ನೇ ವಾದಿ ಕೊತ್ತತ್ತಿ ಗ್ರಾಮದಲ್ಲಿಯೇ ಜಮೀನು ತೆಗೆದುಕೊಂಡು ಮನೆ ಕಟ್ಟಿಕೊಂಡು ಹೆಂಡತಿ ಮಕ್ಕಳ ಜೊತೆ ವಾಸವಿರುತ್ತಾರೆ ಎಂದರೆ ಸರಿ.

5. ನನ್ನ ಸಹೋದರ 3 ನೇ ವಾದಿ ಕೂಡ ಸಿದ್ದೇಗೌಡರ ಮನೆಯಲ್ಲಿಯೇ ಸುಮಾರು 5 ವರ್ಷಗಳ ಕಾಲ ಜೀತಕ್ಕೆ ಇದ್ದರೂ. ಈಗ ಹಾಲಿ 3 ನೇ ವಾದಿ ಮೈಸೂರು ತಾಲ್ಲೂಕಿನ ಇನಕಲ್ ನಲ್ಲಿ ಹೆಂಡತಿ ಮಕ್ಕಳೊಂದಿಗೆ ವಾಸವಿರುತ್ತಾರೆ. 3 ನೇ ವಾದಿ ನರಸಿಂಹ ದೇವಸ್ಥಾನದಲ್ಲಿ ಸುಮಾರು 25 ವರ್ಷಗಳಿಂದ ಕೆಲಸಕ್ಕೆ ಇರುತ್ತಾರೆ ಎಂದರೆ ಸರಿ. ಅಲ್ಲಿ ಅವರಿಗೆ ಸ್ವಂತ ಮನೆ ಇರುವುದಿಲ್ಲ. ಕೂಲಿ ಕಂಬಳ ಮಾಡಿ ಜೀವನ ಸಾಗಿಸುತ್ತಿರುತ್ತಾರೆ. ದೇವಸ್ಥಾನದವರೇ 3 ನೇ ವಾದಿಗೆ ವಾಸಿಸಲು ಸ್ವಲ್ಪ ಜಾಗ ನೀಡಿರುತ್ತಾರೆ ಎಂದರೆ ಸರಿ.

6. ನನ್ನ ಮತ್ತೊಬ್ಬ ಸಹೋದರನಾದ 4 ನೇ ವಾದಿ ಕಾರೆಮೊಳೆಯಲ್ಲಿಯೇ ಮೊದಲಿನಿಂದಲೂ ವಾಸವಿರುತ್ತಾರೆ. 4 ನೇ ವಾದಿಯೂ ಸಹ ನಮ್ಮಂತೆಯೇ 15 ವರ್ಷಗಳ ಕಾಲ ಮಂಡ್ಯದಲ್ಲಿ ಜೀತ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕೇವಲ 1 ವರ್ಷ ಜೀತ ಮಾಡಿ ವಾಪಸ್ಸು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಮಂಡ್ಯದಿಂದ ಬಂದ ನಂತರ 4 ನೇ ವಾದಿಯೂ ಮೈಸೂರಿ ಇಲವಾಲ ದಲ್ಲಿ ವಾಚ್‌ಮನ್ ಆಗಿ ಕೆಲಸ ಮಾಡುತ್ತಿದ್ದನು ಎಂದರೆ

ಸರಿಯಲ್ಲ. ನನ್ನ ತಮ್ಮ ಸಣ್ಣಶೆಟ್ಟಿ ಕಾರೆಮೊಳೆಗೆ ಬಂದು ಸುಮಾರು ಒಂದು ವರ್ಷವಾಗಿರಬಹುದು. ನನ್ನ ತಮ್ಮ ಸಣ್ಣಶೆಟ್ಟಿ ಕಾರಮೊಳೆಯಲ್ಲಿಯೇ ಮನೆಯನ್ನು ಕ್ರಯಕ್ಕೆ ಪಡೆದುಕೊಂಡು ವಾಸವಿರುತ್ತಾರೆ ಎಂದರೆ ಸರಿ. ಈಗಲೂ ಕೂಡ ಸಣ್ಣಶೆಟ್ಟಿ ಜೀವನಕ್ಕಾಗಿ ಕೂಲಿಗೆ ಹೋಗುತ್ತಾರೆ ಎಂದರೆ ಸರಿ.

7. ನಾವು ಐವರು ಅಣ್ಣ-ತಮ್ಮಂದಿರು ನಮ್ಮ ಕುಟುಂಬದವರೊಂದಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಒಬ್ಬರು ಮತ್ತೊಬ್ಬರ ತಂಟೆಗೆ ಹೋಗದೆ ವಾಸವಿರುತ್ತೇವೆ ಎಂದರೆ ಸರಿ. ನಾವು ಐವರು ಅಣ್ಣ-ತಮ್ಮಂದಿರು ನಮ್ಮ-ನಮ್ಮಗಳ ಮನೆಗಳಿಗೆ ನಾವೇ ಮನೆಗಂದಾಯ, ವಿದ್ಯುತ್ ಶುಲ್ಕ ಮತ್ತು ನೀರಿನ ತೆರಿಗೆಯನ್ನು ಪಾವತಿ ಮಾಡುತ್ತಿರುತ್ತೇವೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**